(Off) +91(0821)2526301-53
(Fax) +91(0821) 2330166
e.mail: ceo_zp_mys@nic.in
admzpmys@gmail.com

ಜಿಲ್ಲಾ ಪಂಚಾಯತ್, ಮೈಸೂರು
ZILLA PANCHAYATH, MYSURU

ಸಂಖ್ಯೆ: ಜಿ.ಪಿ.ಇ/ 07 /2014-15 ದಿನಾಂಕ: 23.06.2016

# ಅಧಿಕೃತ ಜ್ಞಾಪನ

**ವಿಷಯ:** ಗ್ರಾಮ ಪಂಚಾಯತ್ ನೌಕರರ ಅನುಮೋದನೆ ಕುರಿತು.

**ಉಲ್ಲೇಖ:**
1. ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/102/ಬಿಇಎಲ್/90 ದಿನಾಂಕ 10.01.1994
2. ಸರ್ಕಾರದ ಅ.ಜ್ಞಾ. ಸಂ: ಗ್ರಾಅಪ/67/ಗ್ರಾಪಂಸಿ/2006 ದಿನಾಂಕ 04.01.2008
3. ಸರ್ಕಾರದ ಪತ್ರ ಸಂ: ಗ್ರಾಅಪ/696/ಗ್ರಾಪಂಕಾ/2013 ದಿನಾಂಕ 21.12.2012
4. ಸರ್ಕಾರದ ಆದೇಶ ಸಂ: ಗ್ರಾಅಪ/22/ಗ್ರಾಪಂಸಿ/2014 ದಿನಾಂಕ 10.09.2014
5. ಸರ್ಕಾರದ ತಿದ್ದೋಲೆ ಸಂ: ಗ್ರಾಅಪ/22/ಗ್ರಾಪಂಸಿ/2014 ದಿನಾಂಕ 20.09.2014
6. ಸರ್ಕಾರದ ಪತ್ರ ಸಂ: ಗ್ರಾಅಪ/32/ಗ್ರಾಪಂಸಿ/2014 ದಿನಾಂಕ 25.10.2014
7. ಸರ್ಕಾರದ ಪತ್ರ ಸಂ: ಗ್ರಾಅಪ/27/ಗ್ರಾಪಂಸಿ/2015 ದಿನಾಂಕ 09.03.2016
8. ಸರ್ಕಾರದ ತಿದ್ದೋಲೆ ಸಂ: ಗ್ರಾಅಪ/32/ಗ್ರಾಪಂಸಿ/2014 ದಿನಾಂಕ 25.10.2014
9. ಜಿಲ್ಲೆಯ ತಾ.ಪಂ. ಕಾರ್ಯನಿರ್ವಾಹಕ ಅಧಿಕಾರಿಗಳು ಸಲ್ಲಿಸಿರುವ ಪ್ರಸ್ತಾವನೆಗಳು.

* * *

ಜಿಲ್ಲಾ ಪಂಚಾಯತ್‌ನಿಂದ ಅನುಮೋದನೆಯನ್ನು ಪಡೆಯದೆ ಗ್ರಾಮ ಪಂಚಾಯತ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಗ್ರಾಮ ಪಂಚಾಯತ್ ಸಿಬ್ಬಂದಿಗಳಿಗೆ ಜಿಲ್ಲಾ ಪಂಚಾಯತ್‌ನಿಂದ ಆಡಳಿತಾತ್ಮಕ ಅನುಮೋದನೆಯನ್ನು ನೀಡುವುದಕ್ಕೆ ಸಂಬಂಧಿಸಿದಂತೆ ಉಲ್ಲೇಖ (4) ರಿಂದ (8)ರ ರೀತ್ಯ ನಿರ್ದೇಶನಗಳನ್ನು ಮತ್ತು ಸ್ಪಷ್ಟೀಕರಣಗಳನ್ನು ನೀಡಲಾಗಿರುತ್ತದೆ. ಉಲ್ಲೇಖ (6)ರ ರೀತ್ಯ ಗ್ರಾಮ ಪಂಚಾಯತ್‌ಗಳ ಆದಾಯವು ದಿನಾಂಕ 10.01.1994ರ ಆದೇಶದ ರೀತ್ಯ ರೂ.30,000/-ಗಳಿಗಿಂತ ಕಡಿಮೆ ಇಲ್ಲದಿದ್ದಲ್ಲಿ ಅಂತಹ ಗ್ರಾಮ ಪಂಚಾಯತ್‌ಗೆ ಒಂದು ಹೆಚ್ಚುವರಿ ಬಿಲ್‌ಕಲೆಕ್ಟರ್ ಹುದ್ದೆಗೆ ಅನುಮೋದನೆ ನೀಡಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ, ಗ್ರಾಮ ಪಂಚಾಯತ್‌ಗಳಲ್ಲಿ ಮೂರು ಸಿಸ್ಟನ್ ಕಿರುನೀರು ಸರಬರಾಜು ಸ್ಥಾವರಕ್ಕೆ ಒಬ್ಬ ವಾಟರ್‌ಮನ್/ಪಂಪ್ ಮೆಕ್ಯಾನಿಕ್/ಪಂಪ್‌ಆಪರೇಟರ್‌ಗಳನ್ನು ಶೇ.40ರ ಸಿಬ್ಬಂದಿ ವೆಚ್ಚವು ಮೀರದಂತೆ ಅನುಮೋದನೆ ನೀಡಲು ಅವಕಾಶವನ್ನು ಕಲ್ಪಿಸಲಾಗಿರುತ್ತದೆ ಮತ್ತು ಗ್ರಾಮ ಪಂಚಾಯತ್‌ನ ಜನಸಂಖ್ಯೆಗನುಗುಣವಾಗಿ ಪೌರಕಾರ್ಮಿಕರ ನೇಮಕಾತಿ ಅನುಮೋದನೆ ನೀಡಲು ಸಹ ಅವಕಾಶವನ್ನು ಕಲ್ಪಿಸಲಾಗಿರುತ್ತದೆ.

ಮೈಸೂರು ಜಿಲ್ಲಾ ಪಂಚಾಯತ್ ವ್ಯಾಪ್ತಿಯ ಗ್ರಾಮ ಪಂಚಾಯತ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಅನುಮೋದನೆಗೆ ಸಂಬಂಧಿಸಿದಂತೆ ತಾಲ್ಲೂಕು ಪಂಚಾಯತ್ ಕಾರ್ಯನಿರ್ವಾಹಕ ಅಧಿಕಾರಿಗಳು ಪರಿಶೀಲಿಸಿ ದೃಢೀಕರಿಸಿ ಉಲ್ಲೇಖ (9)ರಂತೆ ಮಾಹಿತಿಗಳನ್ನು ಸಲ್ಲಿಸಿರುತ್ತಾರೆ. ಉಲ್ಲೇಖ (4) ರಿಂದ (8)ರ ರೀತ್ಯ ಸರ್ಕಾರದಿಂದ ಹೊರಡಿಸಲಾಗಿರುವ ಆದೇಶ/ಮಾರ್ಗದರ್ಶನ ಮತ್ತು ಸ್ಪಷ್ಟೀಕರಣಗಳನ್ನನುಸರಿಸಿ, ಹುದ್ದೆಗೆ ನಿಗದಿಪಡಿಸಿದ ವಿದ್ಯಾರ್ಹತೆ, ಗ್ರಾಮ ಪಂಚಾಯತ್‌ನ ನಡವಳಿ ಹಾಗೂ ಅರ್ಹ ಪ್ರಕರಣಗಳಲ್ಲಿ ರೋಸ್ಟರ್ ನಿಯಮಗಳನ್ನು ಪರಿಶೀಲಿಸಿ ಅನುಮೋದನೆಗೆ ಅರ್ಹರಿರುವ ನೌಕರರಿಗೆ ತಕ್ಷಣದಿಂದ ಅನ್ವಯವಾಗುವಂತೆ ಕೆಳಕಂಡ ಷರತ್ತಿಗೊಳಪಟ್ಟು ಅನುಮೋದನೆಯನ್ನು ನೀಡಲಾಗಿದೆ.

1. **ಪರೀಕ್ಷಾರ್ಥ ಅವಧಿ:** ಅನುಮೋದನೆ ನೀಡಲಾದ ಗ್ರಾಮ ಪಂಚಾಯತ್ ನೌಕರರು ಒಂದು ವರ್ಷದ ಪರೀಕ್ಷಾರ್ಥ ಅವಧಿಯನ್ನು ಹೊಂದಿದ್ದು, ಸದರಿ ಅವಧಿಯಲ್ಲಿ ತೃಪ್ತಿಕರ ಸೇವೆಯನ್ನು ಪೂರೈಸಬೇಕು. ಈ ಅವಧಿಯಲ್ಲಿ ಅವರು ಗ್ರಾಮ ಪಂಚಾಯತ್ ಸಿಬ್ಬಂದಿ ಹುದ್ದೆಗೆ ಅರ್ಹರೆಂದು ಭಾವಿಸಿದ ನಂತರ ಅವರ ಸೇವೆಯನ್ನು ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆ/ಆದೇಶಗಳನ್ವಯ ಗ್ರಾಮ ಪಂಚಾಯತ್‌ನ ಹುದ್ದೆಗಳಲ್ಲಿ ಗ್ರಾಮ ಪಂಚಾಯತ್ ನೌಕರರೆಂದು ಖಾಯಂಗೊಳಿಸತಕ್ಕದ್ದು.
2. **ಶಿಸ್ತುಪ್ರಾಧಿಕಾರ:** ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 113 (2)(3)(4)ರ ಅನ್ವಯ ಗ್ರಾಮ ಪಂಚಾಯತ್ ಸಿಬ್ಬಂದಿಗಳಿಗೆ ಶಿಸ್ತುಪ್ರಾಧಿಕಾರವನ್ನು ನಿರ್ದಿಷ್ಟಪಡಿಸಲಾಗಿದೆ. ಕರ್ನಾಟಕ ಪಂಚಾಯತ್ ರಾಜ್ ಅಧಿನಿಯಮ 1993ರ ಪ್ರಕರಣ 286ರಡಿಯ ನಿರೂಪಣೆಯಂತೆ ಗ್ರಾಮ ಪಂಚಾಯತ್ ಸಿಬ್ಬಂದಿಯು **'ಲೋಕನೌಕರ'** ಎಂದು ಪರಿಗಣಿಸಿದ್ದು, ತತ್ಕಾಲದಲ್ಲಿ ಜಾರಿಯಲ್ಲಿರುವ ಭಾರತ ದಂಡ

ಮು.ತಿ.ನೋ.,